# ಅನರ್ಹರಿಗೆ ಗ್ರಾಮದಲ್ಲಿ ಪ್ರವೇಶ ಇಲ್ಲ!

ತೆಲಸಂಗ (ಬೆಳಗಾವಿ): ಅಥಣಿ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಮಹೇಶ್ ಕುಮಠಳ್ಳಿ ಮತ ಯಾಚಿಸಲು ಗ್ರಾಮಕ್ಕೆ ಬರಬಾರದೆಂದು ಶುಕ್ರವಾರ ಪ್ರವೇಶ ನಿಷೇಧ ಫಲಕ ಹಾಕಿರುವ ತೆಲಸಂಗ ಗ್ರಾಮಸ್ಥರು, ವಿರೋಧ ವ್ಯಕ್ತಪಡಿಸಿದ್ದಾರೆ. ಬೆಳಗ್ಗೆ ಮಾಜಿ ಸಿಎಂ ಸಿದ್ದರಾಮಯ್ಯ ಗ್ರಾಮಕ್ಕೆ ಆಗಮಿಸುವ ಮುನ್ನ ಗ್ರಾಮದ ವಿವಿಧೆಡೆ, 'ಅಥಣಿಯು ಶಿವಯೋಗಿಗಳ ಪುಣ್ಯ ಕ್ಷೇತ್ರ. ಹಣಕ್ಕಾಗಿ ತಮ್ಮ ಶಾಸಕ ಸ್ಥಾನವನ್ನೇ ಮಾರಾಟ ಮಾಡಿಕೊಂಡ ಅನರ್ಹರಿಗೆ ನಮ್ಮ ಗ್ರಾಮಕ್ಕೆ ಪ್ರವೇಶ ಇಲ್ಲ' ಎಂಬ ಫಲಕ ಅಳವಡಿಸಲಾಗಿದೆ. ನಿವೃತ್ತ ಲೋಕಾಯುಕ್ತ ಸಂತೋಷ ಹೆಗ್ಡೆ ಭಾವಚಿತ್ರವುಳ್ಳ ಫಲಕದಲ್ಲಿ ಅವರು ಪಕ್ಷಾಂತರಿಗಳ ಕುರಿತಾಗಿ ಹೇಳಿರುವ 'ಪಕ್ಷಾಂತರ ಮಾಡಿದ ಅನರ್ಹ ಶಾಸಕರನ್ನು ತಮಿಳುನಾಡು, ಮಹಾರಾಷ್ಟ್ರ, ಗುಜರಾತಿನಲ್ಲಿ ಜನ ಸೋಲಿಸಿದ್ದಾರೆ. ಕರ್ನಾಟಕದಲ್ಲಿ ಒಬ್ಬನೇ ಒಬ್ಬ ಅನರ್ಹ ಶಾಸಕ ಗೆದ್ದರೂ ಆ ಕ್ಷೇತ್ರದ ಮತದಾರ ತನ್ನನ್ನು ತಾನು ಹಣ, ಹೆಂಡಕ್ಕೆ ಅಡವಿಟ್ಟುಕೊಂಡಂತೆ' ಎಂಬ ಬರಹದ ಫಲಕ ಹಾಕಲಾಗಿತ್ತು. ಚುನಾವಣಾ ಆಯೋಗದ ಸೂಚನೆ ಮೇರೆಗೆ ಗ್ರಾಪಂ ಅಭಿವೃದ್ಧಿ ಅಧಿಕಾರಿ ಪೊಲೀಸರೊಂದಿಗೆ ತೆರಳಿ ಫಲಕಗಳನ್ನು ತೆರವುಗೊಳಿಸಿದ್ದಾರೆ.




» ಬಿಜೆಪಿ ಅಭ್ಯರ್ಥಿ ಕುಮಠಳ್ಳಿ ವಿರೋಧಿಸಿ ನಾಮಫಲಕ

## ಯೋಗೇಶ್ವರ್‌ಗೆ ಜನರ ಕ್ಲಾಸ್

ಹುಣಸೂರು: ಬಿಜೆಪಿ ಅಭ್ಯರ್ಥಿ ಎಚ್.ವಿಶ್ವನಾಥ್ ಪರ ಪ್ರಚಾರಕ್ಕೆ ಬಂದ ಮಾಜಿ ಸಚಿವ ಸಿ.ಪಿ.ಯೋಗೇಶ್ವರ್‌ಗೆ ತಾಲೂಕಿನ ಹೆಗ್ಗಂದೂರು ಗ್ರಾಮಸ್ಥರು, 'ಒಂದೂವರೆ ವರ್ಷದ ಹಿಂದೆ ಒಮ್ಮತದಿಂದ ವಿಶ್ವನಾಥ್ ಗೆಲ್ಲಿಸಿದ್ದೆವು. ಹೇಳದೆ ಕೇಳದೆ ರಾಜೀನಾಮೆ ಕೊಟ್ಟು ಇದೀಗ ಮತ್ತೆ ಕೇಳಲು ಬಂದಿದ್ದೀರಲ್ಲ, ನಾಚಿಕೆಯಾಗುವುದಿಲ್ಲವೇ ನಿಮಗೆ ಎಂದು ತರಾಟೆ ತೆಗೆದುಕೊಂಡರು. ಗುಂಪನ್ನು ಸಮಾಧಾನಿಸಿ ಮಾತನಾಡಲು ಯೋಗೇಶ್ವರ್ ಯತ್ನಿಸಿದರೂ ಗ್ರಾಮಸ್ಥರು ಅವಕಾಶ ನೀಡದ ಕಾರಣ ತೆರಳಿದರು.

## ದಳದವನೆಂದು ಮುಖ್ಯಶಿಕ್ಷಕನಿಗೆ ನೋಟಿಸ್!



ತಿಮ್ಮೇಗೌಡ-ದಾನಸುಂದರ್

ಕೆ.ಆರ್.ಪೇಟೆ: ಜೆಡಿಎಸ್ ಕಾರ್ಯಕರ್ತ ಎಂದು ಭಾವಿಸಿ ಮುಖ್ಯ ಶಿಕ್ಷಕನಿಗೆ ಚುನಾವಣಾ ಪ್ರಚಾರದಲ್ಲಿ ತೊಡಗಿಸಿಕೊಂಡಿದ್ದರೆಂಬ ಆರೋಪದ ಮೇಲೆ ಚುನಾವಣಾಧಿಕಾರಿ ನೋಟಿಸ್ ಜಾರಿ ಮಾಡಿದ್ದ ಪ್ರಸಂಗ ನಡೆದಿದೆ. ಮಾಜಿ ಸಚಿವ ಎಚ್.ಡಿ.ರೇವಣ್ಣ ಮಾಂಬಹಳ್ಳಿ ಸುತ್ತಮುತ್ತ ಮುಖಂಡರ ಜತೆ ಮತಯಾಚಿಸುತ್ತಿದ್ದರು. ರೇವಣ್ಣ ಹಿಂಭಾಗ ಮುಖಂಡ ಸೋಮನಹಳ್ಳಿ ತಿಮ್ಮೇಗೌಡ ಇದ್ದರು. ಸರ್ಕಾರಿ ಶಾಲೆ ಮುಖ್ಯಶಿಕ್ಷಕ ದಾನಸುಂದರ್, ತಿಮ್ಮೇಗೌಡರನ್ನು ಹೋಲುತ್ತಿದ್ದಕ್ಕೆ ಕೆಲವರು ಮುಖ್ಯಶಿಕ್ಷಕ ಜೆಡಿಎಸ್ ಅಭ್ಯರ್ಥಿ ಪರ ಪ್ರಚಾರದಲ್ಲಿ ಪಾಲ್ಗೊಂಡಿದ್ದಾರೆಂದು ಜಾಲತಾಣದಲ್ಲಿ ವಿಡಿಯೋ ವೈರಲ್ ಮಾಡಿದ್ದರು. ರೇವಣ್ಣ ಹಿಂಭಾಗ ನಿಂತಿದ್ದು ನಾನು ಎಂದು ತಿಮ್ಮೇಗೌಡ ಬಿಇಒಗೆ ಪತ್ರ ಬರೆದಿದ್ದಾರೆ.